# ಪ್ರಬಂಧ: "ಕಾನೂನು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವಲ್ಲಿ ಪೋಲೀಸ್ ಇಲಾಖೆಯ ಪಾತ್ರ."

ಲೇಖಕರು: ಶ್ರೀ. ಶಂಕರ್. G. ಬೆಳ್ಳುಬ್ಬಿ
ಶಿಕ್ಷಕರು.
Mr. S. G. Bellubbi, (AM)
Director of SRWORLD GK Channel.

"ಬರ್ತ್ ಸರ್ಟಿಫಿಕೇಟ್‌ನಿಂದ ಡೆತ್ ಸರ್ಟಿಫಿಕೇಟ್‌ನವರೆಗೂ" ವ್ಯೆ ಚಾಚಿಕೊಂಡಿರುವ ಅವ್ಯವಸ್ಥೆಯನ್ನು ಸುವ್ಯವಸ್ಥೆಗೆ ತರುವಲ್ಲಿ, ಕಾನೂನು ಹಾಗೂ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಪೋಲೀಸ್ ಇಲಾಖೆಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಇಂದಿನ ಆಧುನಿಕ ಯುಗದಲ್ಲಿ ಪೋಲೀಸರಿಗೆ ಒಂದು ಸ್ಪಷ್ಟವಾದ ಕರ್ತವ್ಯ ಹಾಗೂ ಜವಾಬ್ದಾರಿ ಕೊಡಲಾಗಿದ್ದು, ಸದ್ಯಕ್ಕೆ ಪೋಲೀಸ್ ಇಲಾಖೆಯು ನಿರ್ವಹಿಸದೇ ಇರುವ ಕರ್ತವ್ಯವೇ ಇಲ್ಲಾ ಎಂದರೆ ತಪ್ಪಾಗದು.

ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಸ್ಥಾಪಿಸುವ ಸಲುವಾಗಿ ಪೋಲೀಸರ ಪಾತ್ರ 24x7 ಘಂಟೆಯೂ ನಿರಂತರವಾಗಿ ಇರುತ್ತದೆ. ಸಾರ್ವಜನಿಕರು ಹಬ್ಬ ಹುಣ್ಣಿಮೆಗಳನ್ನು ಆಚರಿಸುವಾಗ ಪೋಲೀಸರು ಅವರ ಭದ್ರತೆಯ ಸಲುವಾಗಿ ರಸ್ತೆಯ ಮೇಲೆ ನಿಂತು ಎಚ್ಚರಿಕೆಯಿಂದ ಗಸ್ತಿನ ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ಹಾಗೆಯೇ ಸಾರ್ವಜನಿಕರು ವಿಶ್ರಾಂತಿ ಪಡೆಯುವಾಗ ಪೋಲೀಸರು ನಿದ್ದೆಯಿಲ್ಲದೇ ರಾತ್ರಿಯೆಲ್ಲಾ ಗಸ್ತು ತಿರುಗಿ ಅವರ ಆಸ್ತಿ-ಪಾಸ್ತಿಯನ್ನು ರಕ್ಷಿಸುವಲ್ಲಿ ಮುನ್ನೆಚ್ಚರಿಕೆ ವಹಿಸುವ ಮಹತ್ವದ ಪಾತ್ರವನ್ನು ಯಶಸ್ವಿಯಾಗಿ ನಿಭಾಯಿಸುತ್ತಿರುವುದರಿಂದಲೇ ಶ್ರೀಸಾಮಾನ್ಯರು ಸರಳ ಹಾಗೂ ನೆಮ್ಮದಿಯ ಜೀವನ ನಡೆಸಲು ಸಾಧ್ಯ.

## * ಪೋಲೀಸ್ ಇಲಾಖೆಯ ಸುಧಾರಣೆಯ ಹಾದಿ:

1861ರಲ್ಲಿ ಪೋಲೀಸ್ ಕಾಯ್ದೆಗೆ ಅಂಗೀಕಾರ ದೊರೆತಾಗಿನಿಂದಲೂ ಸಾಮಾಜಿಕ ರೀತಿ-ನೀತಿಗೆ ತಕ್ಕಂತೆ ಪೋಲೀಸ್ ಇಲಾಖೆಯಲ್ಲಿ ಹಲವಾರು ಸುಧಾರಣೆ, ಹಾಗೂ ಬದಲಾವಣೆಗಳಾಗಿವೆ.

ಸಮಾಜದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಈ ಇಲಾಖೆಯು ತನಿಖೆಗೆ ಪೂರಕವಾಗಿ ನಾಲ್ಕು ವಿಭಾಗಗಳನ್ನೊಳಗೊಂಡ ಪ್ರಯೋಗಾಲಯವಿದೆ.



downloaded from: www.kpscvaani.com
Scanned by CamScanner

1. ಛಾಯಾಚಿತ್ರ ವಿಭಾಗ.
2. ಬಂದೂಕು ಪರೀಕ್ಷಾ ವಿಭಾಗ.
3. ರಾಸಾಯನಿಕ ಪರೀಕ್ಷಾ ವಿಭಾಗ (ವಿಧಿ ವಿಜ್ಞಾನ ವಿಭಾಗ)
4. ವಿವಾದಗ್ರಸ್ತ ದಾಖಲೆಗಳ ಪರೀಕ್ಷಾ ವಿಭಾಗ.

ಇಷ್ಟೇ ಅಲ್ಲದೆ ವಿಶೇಷ ಘಟಕಗಳಾದ 1. ಕನ್ನ, ಕಳವು ಮತ್ತು ಕೊಲೆ ಪ್ರಕರಣಗಳ ಶೋಧನಾ ದಳ. 2. ಮೋಸದ ಪ್ರಕರಣಗಳ ಪತ್ತೆ ದಳ. 3. ಖೋಟಾನೋಟು ಮತ್ತು ಶಸ್ತ್ರಾಸ್ತ್ರಗಳಿಗೆ ಸಂಬಂಧಿಸಿದ ಪ್ರಕರಣಗಳ ಶೋಧನಾ ದಳ. 4. ವಿಶೇಷ ವಿಚಾರಣಾ ದಳ. ಹಾಗೂ ವೈರ್‌ಲೆಸ್ ವಿಭಾಗ ಮತ್ತು ಶ್ವಾನದಳಗಳೂ ಕೂಡಾ ಇಂದು ಸಮಾಜದಲ್ಲಿ ಕಾರ್ಯನಿರತವಾಗಿವೆ.

## * ಪೋಲೀಸರ ಮೂಲಭೂತ ಕರ್ತವ್ಯಗಳು:

ಸಮಾಜದಲ್ಲಿ ಪೋಲೀಸರು ನಿರ್ವಹಿಸಬೇಕಾದ ಕರ್ತವ್ಯಗಳನ್ನು ಕೆ.ಪಿ. ಆಕ್ಟ್ ಕಲಂ 65, 68, 69 ಮತ್ತು 73ರಲ್ಲಿ ತಿಳಿಸಿದ್ದು, ಕೇಂದ್ರ ಮತ್ತು ರಾಜ್ಯ ಸರಕಾರಗಳು ರಚಿಸಿದಂತಹ ಸ್ಥಳೀಯ ಮತ್ತು ವಿಶೇಷ ಕಾಯ್ದೆಗಳಲ್ಲಿ ಹೇಗೆ ವರ್ತಿಸಬೇಕೆಂದು ಹಾಗೂ ಕಾರ್ಯ-ನಿರ್ವಹಿಸಬೇಕೆಂದು ತಿಳಿಸುತ್ತದೆ. ಅಪರಾಧಗಳನ್ನು ತಡೆಗಟ್ಟುವುದು ನಿಯಂತ್ರಿಸುವುದು, ಸಮಾಜದಲ್ಲಿ ಶಾಂತಿ-ಸು-ವ್ಯವಸ್ಥೆಯನ್ನು ಕಾಪಾಡು-ವುದು, ನಾಗರಿಕರ ಜೀವ, ಸ್ವಾತಂತ್ರ್ಯ, ಆಸ್ತಿಯನ್ನು ರಕ್ಷಿಸುವುದು. ಇವೇ ಮೊದಲಾದವು ಪೋಲೀಸರ ಮೂಲಭೂತ ಕರ್ತವ್ಯಗಳಾಗಿವೆ.

## * ಪೋಲೀಸರು ನಿರ್ವಹಿಸಲೇಬೇಕಾದ ಕರ್ತವ್ಯಗಳು:

* ಇಂದಿನ ಬದಲಾಗುತ್ತಿರುವ ಪ್ರಗತಿಯ ಸಮಾಜದಲ್ಲಿ ಸಾಮಾಜಿಕ ಪರಿಸ್ಥಿತಿಯ ಸೂಕ್ಷ್ಮತೆಯನ್ನರಿತು ಕರ್ತವ್ಯ ನಿರ್ವಹಿಸಬೇಕು.
* ಪೋಲೀಸರು ತಮ್ಮ ಕರ್ತವ್ಯ ನಿರ್ವಹಿಸುವಾಗ ಎಲ್ಲಾ ರೀತಿಯ ಪ್ರಭಾವಗಳಿಂದ ದೂರವಿದ್ದು, ನಿಷ್ಪಕ್ಷಪಾತಿಯಾಗಿಯೇ ಕಾರ್ಯ-ನಿರ್ವಹಿಸಬೇಕು.
* ಸಮಾಜದಲ್ಲಿ ಪೋಲೀಸರ ಪಾತ್ರ ಸಾಂವಿಧಾನಿಕ ಕಾಯ್ದೆ ಕಾನೂನಿನ ಪರಿಮಿತಿಯೊಳಗಿರಬೇಕೇ ವಿನಃ ಸ್ವೇಚ್ಛೆಯಿಂದ ಕೂಡಿರಬಾರದು.
* ಕೆಲವೊಂದು ಸಂದರ್ಭಗಳಲ್ಲಿ ಪೋಲೀಸರು ನಿರ್ಜೀವ ಮತ್ತು ಜೀವಂತ ವಸ್ತು ವಿಷಯಗಳ ಮೇಲ್ವಿಚಾರಣೆ ಹಾಗೂ ನಿಯಂತ್ರಣವನ್ನೂ ಸಹ ಮಾಡಬೇಕಾಗುತ್ತದೆ.



downloaded from: www.kpscvaani.com
Scanned by CamScanner

* ಪೋಲೀಸರಿಗೆ ಕರ್ತವ್ಯ ನಿರ್ವಹಿಸಲು ವೃತ್ತಿಪರತೆ, ದಕ್ಷತೆ, ಪ್ರಾಮಾಣಿಕತೆ, ಸಾರ್ವಜನಿಕರೊಂದಿಗೆ ಸೌಮ್ಯವರ್ತನೆಯೂ ಅತ್ಯವಶ್ಯಕ, ಆಗ ಮಾತ್ರ ಇಲಾಖೆಯ ಗೌರವ, ನೈತಿಕತೆಯೂ ಇಮ್ಮಡಿಸುತ್ತದೆ.

* ಇಂದು ಸಮಾಜದ ಸ್ವಾಸ್ಥ್ಯವನ್ನು ಕೆಡಿಸುತ್ತಿರುವ ಲೈಂಗಿಕ ಅಪರಾಧಗಳ ಬಗ್ಗೆ ಸಾರ್ವಜನಿಕರಲ್ಲಿ ಪೋಲೀಸರು ಜಾಗೃತಿಯನ್ನು ಮೂಡಿಸಬೇಕು. ಅಂತಹ ಅಪರಾಧಿಗಳಿಗೆ ಉಗ್ರ ಹಾಗೂ ಶೀಘ್ರ ಶಿಕ್ಷೆ ವಿಧಿಸಬೇಕು.

ಹೀಗೆ ಸಮಾಜದಲ್ಲಿ ಅಪರಾಧಗಳನ್ನು ನಿಯಂತ್ರಣದಲ್ಲಿ ಇಡಲು ಕೆಲವು ಬಾರಿ ವಿವಿಧ ಇಲಾಖೆಗಳೂ, (ಉದಾ: ಅಬಕಾರಿ, ಅರಣ್ಯ ಇಲಾಖೆಗಳು) ಸಾರ್ವಜನಿಕರೂ ಸಹಕರಿಸಬೇಕಾಗುತ್ತದೆ.

ಪೋಲೀಸರ ಇಂತಹ ಅತ್ಯಧಿಕ ಕೆಲಸದ ಒತ್ತಡ ಸಾಮಾಜಿಕ ಸ್ವಾಸ್ಥ್ಯದ ದೃಷ್ಟಿಯಿಂದ ತರವಲ್ಲ. ಅವರೂ ಕೂಡಾ ಎಲ್ಲರಂತೆ ಮನುಷ್ಯರಲ್ಲವೇ? 24x7 ಗಂಟೆಯೂ ಕರ್ತವ್ಯನಿರತರಾಗಿದ್ದರೆ ಅವರ ಕೆಲಸದ ಒತ್ತಡ ಅಧಿಕವಾಗಿ ಮಾನಸಿಕ ಸ್ವಾಸ್ಥ್ಯ ಹದಗೆಟ್ಟು ಅದರ ಪರಿಣಾಮ ಸಮಾಜದ ಮೇಲಾಗುವ ಸಂಭವವಿರುತ್ತದೆ. ಸಾರ್ವಜನಿಕರೂ ಕೂಡಾ ತಮ್ಮ ಜಗಳ, ಘರ್ಷಣೆ, ತಂಟೆ ತಕರಾರುಗಳನ್ನು ಶಾಂತಿಯುತವಾಗಿ ಪೋಲೀಸ್ ಠಾಣೆಗಳ ಮೂಲಕ ಬಗೆಹರಿಸಿಕೊಳ್ಳಬೇಕೇ ವಿನ: ಪೋಲೀಸ್ ಠಾಣೆಗಳಿಗೆ ಹೋಗುವುದೇ ತಮ್ಮ ಘನತೆ-ಗೌರವಗಳಿಗೆ ಕುಂದು ತರುತ್ತದೆ ಎಂಬ ಭಾವನೆಯನ್ನು ಬೆಳೆಸಿಕೊಳ್ಳಬಾರದು. ಪೋಲೀಸ್ ಠಾಣೆಗಳಿರುವುದೇ ಸಾರ್ವಜನಿಕ ಸೇವೆಗಲ್ಲವೇ?

* **ಸುಧಾರಣಾ ಹಾದಿಯಲ್ಲಿ ಇಲಾಖೆ:**

ಜನರ ಸಮಸ್ಯೆಗಳಿಗೆ ಶೀಘ್ರವಾಗಿ ಸ್ಪಂದಿಸುವ ಉದ್ದೇಶದಿಂದ. ಕರ್ನಾಟಕ ಸರ್ಕಾರವು ದೇಶದಲ್ಲಿಯೇ ಮೊಟ್ಟಮೊದಲ ಬಾರಿಗೆ ರಿಮೋಟ್ FIR ನೋಂದಣಿ (ದೂರು ಸ್ವೀಕಾರ ಕೇಂದ್ರ)ಯನ್ನು ಕಮಿಷನರೇಟ್ ವ್ಯಾಪ್ತಿಗೊಳಪಡುವ 105 ಕಾನೂನು ಸುವ್ಯವಸ್ಥೆ ಮತ್ತು 42 ಸಂಚಾರ ಪೋಲೀಸ್ ವ್ಯಾಪ್ತಿಯಲ್ಲಿ ದೂರು ದಾಖಲಿಸಿ ಡಿಜಿಟಲ್ ಸಹಿಯ FIR ಪ್ರತಿ ಪಡೆಯಲು ಅನುವು ಮಾಡಿರುವುದು ಇಲಾಖೆಯ ಪ್ರಗತಿಯ ಒಂದು ಮೈಲಿಗಲ್ಲು. ಇದನ್ನು ಪ್ರಾಯೋಗಿಕವಾಗಿ 2014ರ ಸೆಪ್ಟಂಬರ್ 14ರಂದು ಬೆಂಗಳೂರಿನಲ್ಲಿ ಆರಂಭಿಸಲಾಗಿದೆ.

downloaded from: www.kpscvaani.com
Scanned by CamScanner

ಅಷ್ಟೇ ಅಲ್ಲದೆ ಸಾರ್ವಜನಿಕ ಹಿತದೃಷ್ಟಿಯಿಂದ ಪ್ರತಿಯೊಂದು ಜಿಲ್ಲೆಗಳಲ್ಲಿಯೂ ಪೋಲೀಸ್ ನಿಯಂತ್ರಣ ಕೊಠಡಿಗಳನ್ನು ನಿರ್ಮಿಸಿದ್ದು, ನಾಗರಿಕರ ಅನುಕೂಲಕ್ಕಾಗಿ 100, 101, 103, 1091, 1090, ಹಾಗೂ 1098 (ಸಹಾಯವಾಣಿ) ಉಚಿತ ದೂರವಾಣಿ ಕರೆ ಸೌಲಭ್ಯಗಳನ್ನೂ ಸಹ ನೀಡಿದೆ. ಈ ಸೌಲಭ್ಯದಿಂದಾಗಿ ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಅವಕಾಶ ಕಲ್ಪಿಸಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಪ್ರಸ್ತುತ ಸಮಾಜದಲ್ಲಿ ಕಾನೂನು & ಶಾಂತಿ-ಸುವ್ಯವಸ್ಥೆಯ ನಿರ್ವಹಣೆ ದಿನೇ ದಿನೇ ಸವಾಲಾಗುತ್ತಿದೆ. ಅಪರಾಧಗಳ ಸಂಖ್ಯೆ ಮಾತ್ರವಲ್ಲ, ವಿಭಿನ್ನ ಕಾರಣಗಳಿಗಾಗಿ ಕಾನೂನಿನ ನೆರವನ್ನೂ ಕೋರಿ ಪೋಲೀಸ್ ಇಲಾಖೆಗೆ ಬರುವವರ ಸಂಖ್ಯೆಯೂ ಅಧಿಕವಾಗಿದೆ. ಒಂದು ರಾಷ್ಟ್ರದ ಸು-ಸ್ಥಿರ-ಅಭಿವೃದ್ಧಿಯಲ್ಲಿ ಶಿಕ್ಷಕರ, ವೈದ್ಯರು, ಇಂಜಿನಿಯರುಗಳಂತೆ ಪೋಲೀಸರ ಪಾತ್ರವೂ ಅಷ್ಟೇ ಮುಖ್ಯವಾಗಿದೆ.

ಯಾವುದೇ ಒಂದು ಜನಾಂಗ, ಸಮಾಜವು ಸುರಕ್ಷಿತವಾಗಿ ನೆಮ್ಮದಿಯಿಂದ ಬದುಕುವ ಪ್ರಕ್ರಿಯೆಯಲ್ಲಿ ಪೋಲೀಸರ ಪಾತ್ರ ಮಹತ್ವದ್ದು. ಅಲ್ಲದೆ ಸಮಾಜದಲ್ಲಿನ ಅಪರಾಧಗಳನ್ನು ಕಡಿಮೆಮಾಡಲು ಒಳ್ಳೆಯ ವಿದ್ಯಾಭ್ಯಾಸ, ಜನರಲ್ಲಿ ಕಾನೂನು ಕಟ್ಟಳೆಗಳ ಅರಿವು ಅಷ್ಟೇ ಅಗತ್ಯ. ರಾಷ್ಟ್ರಪತಿಯಾಗಿದ್ದ APJ ಕಲಾಂರು ಹೇಳಿದಂತೆ "ದೇಶದ ಭದ್ರತೆಗೆ ಅಪಾಯವನ್ನೊಡ್ಡುವ ಅಪರಾಧಿಗಳನ್ನು, ಅಕ್ರಮಣಕಾರಿಗಳನ್ನು ಪತ್ತೆ ಹಚ್ಚಲು ಅತ್ಯಾಧುನಿಕ ತಂತ್ರಜ್ಞಾನ, ಕೇಂದ್ರ ಕಾರಾಗೃಹಗಳಿಂದಲೇ ಜಿಲ್ಲಾ ನ್ಯಾಯಾಲಯಗಳಿಗೆ ಆರೋಪಿಗಳನ್ನು ಹಾಜರುಪಡಿಸುವ ವ್ಯವಸ್ಥೆಯಾದ 'ಮಲ್ಟಿ ಮೀಡಿಯಾ ಕಾನ್ಫರೆನ್ಸಿಂಗ್ ವ್ಯವಸ್ಥೆ'ಯು ಇಂದು ಪೋಲೀಸ್ ಇಲಾಖೆಗೆ ತುಂಬಾ ಅತ್ಯವಶ್ಯಕತೆಯಿದೆ.

ಲೇಖಕರು: Mr. S. G. Bellubbi, (AM)
Director of SRWORLD GK Channel.



downloaded from: www.kpscvaani.com
Scanned by CamScanner